## ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು

## ಸಿ.ಸಿಃ 1301/2014

| | | | |
|---|---|---|---|
| ಸಾಕ್ಷಿದಾರರ ಹೆಸರು | | ಜಯಮ್ಮ | ಪ್ರಾ.ಸಾಃ 4 |
| ಗಂಡನ ಹೆಸರು | | ಲೇಟ್ ತಮ್ಮಣ್ಣ | ಚಾಸಾಃ 4 |
| ವಯಸ್ಸು | | 73 | |
| ಕೆಲಸ | | ಗೃಹಿಣಿ | ಸಾ ಪ್ರ ಬೋ |
| ವಾಸ | | ನಂಜನಗೂಡು | ದಿಃ 07.02.2024 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ-1 ನನ್ನ ಬಾವನ ಮಗ, ಚಾಸಾ-2 ನನ್ನ ಬಾವನ ಸೊಸೆ, ಚಾಸಾ-3 ನನ್ನ ಬಾವನ ಮತ್ತೊಬ್ಬ ಮಗ.

2. ಸುಮಾರು 10 ವರ್ಷಗಳ ಹಿಂದೆ ನಾನು ಮತ್ತು ಚಾಸಾ-3 ರವರು ನಮಗೆ ಸೇರಿದ ಬ್ಯಾಡಾರುಹುಂಡಿ ಗ್ರಾಮದಲ್ಲಿನ ನಮ್ಮ ಜಮೀನಿಗೆ ಬೆಳಿಗ್ಗೆ 7.30 ಕ್ಕೆ ಹೋಗಿದ್ದೆವು. ಚಾಸಾ-2 ಮತ್ತು ನನ್ನ ಮೊಮ್ಮಗಳಾದ ಮೃತ ರುಚಿತಾರವರು ನಮಗೆ ಊಟ ತೆಗೆದುಕೊಂಡು ನಂಜನಗೂಡಿನಿಂದ ನಮ್ಮ ಜಮೀನಿಗೆ ಬರುತ್ತಿದ್ದರು. ನಾನು ಜಮೀನಿನ ಬಳಿ ರಸ್ತೆಯ ಪಕ್ಕ ಅವರಿಂದ ಊಟ ತೆಗೆದುಕೊಂಡು ಹೋಗಲು ನಿಂತಿದ್ದೆನು. ಸದರಿ ಸ್ಕೂಟರಿನಲ್ಲಿ ವಿನುತ ಮತ್ತು ಮೃತ ರುಚಿತಾರವರು ಬರುತ್ತಿದ್ದರು. ಸ್ಕೂಟರನ್ನು ವಿನುತರವರು ಚಾಲನೆ ಮಾಡುತ್ತಿದ್ದರು. ಚಾಮುಂಡಿ ಬಸ್ಸಿನ ಚಾಲಕ ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದು ವಿನುತರವರ ಸ್ಕೂಟರಿಗೆ ಡಿಕ್ಕಿಪಡಿಸಿದ್ದು, ಆಗ ರುಚಿತಾರವರು ರಸ್ತೆಗೆ ಬಿದ್ದರು. ಬಿದ್ದ ತಕ್ಷಣ ಅವರು ಪ್ರಜ್ಞೆ ತಪ್ಪಿ ಕೋಮಾವಸ್ಥೆಗೆ ಹೋದರು. ಆಗ ನಾನು ಕೂಡ ಬಿದ್ದೆನು. ನನ್ನ ಕೈಗೂ ಕೂಡ ಗಾಯ ಆಯಿತು. ವಿನುತರವರಿಗೆ ಸಣ್ಣ-ಪುಟ್ಟ ಪೆಟ್ಟಾಯಿತು. ನಂತರ ನನ್ನನ್ನು ಮತ್ತು ರುಚಿತಾರವರನ್ನು

ಚಾಸಾ-1 ಮತ್ತು 3 ರವರು ಮೈಸೂರಿನ ಅಪೊಲೋ ಆಸ್ಪತ್ರೆಗೆ ಕರೆದುಕೊಂಡು ಹೋದರು. ರುಚಿತಾರವರು ಅಪೊಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಸೇರಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ. ಅಪಘಾತಪಡಿಸಿದ ಚಾಲಕನ ಹೆಸರು ಮಂಟಿ. ದೂರನ್ನು ನನ್ನ ಬಾವನ ಮಕ್ಕಳು ನೀಡಿರುತ್ತಾರೆ. ಸಾಕ್ಷಿ ನಿಪಿ-3 ರಿಂದ 5 ರ ಛಾಯಾಚಿತ್ರಗಳಲ್ಲಿ ಅಪಘಾತಪಡಿಸಿದ ಬಸ್ಸನ್ನು ನೋಡಿ ಗುರುತಿಸಿರುತ್ತಾರೆ. ಅಪಘಾತದ ಕುರಿತು ನನ್ನಿಂದ ಪೊಲೀಸರು ಹೇಳಿಕೆಯನ್ನು ಪಡೆದಿರುವ ಬಗ್ಗೆ ನನಗೆ ನೆನಪಿಲ್ಲ.

**<u>ಪಾಟೀ ಸವಾಲು ಶ್ರೀ ಎಸ್.ಎಸ್.ಬಿ ವಕೀಲರಿಂದ ಆರೋಪಿ ಪರವಾಗಿಃ</u>**

3. ಅಪಘಾತದ ಕುರಿತು ನನಗೆ ಸಂಪೂರ್ಣ ಮಾಹಿತಿ ಗೊತ್ತಿಲ್ಲ. ಅಪಘಾತ ಏರ್ಪಡುವ ಕಾಲಕ್ಕೆ ನಾನು ನಮ್ಮ ಜಮೀನಿನ ಪಕ್ಕದಲ್ಲಿನ ರಸ್ತೆಯಲ್ಲಿ ನಿಂತಿದ್ದೆನು. ನಾನು ಮತ್ತು ಚಾಸಾ-3 ರವರು ಜಮೀನಿಗೆ ಹೋಗಿದ್ದೆವು. ಆಗ ಸಮಯ ಬೆಳಿಗ್ಗೆ 7 ರಿಂದ 7.30 ಆಗಿತ್ತು. ನಮ್ಮ ಜಮೀನಿನಿಂದ ಮುಖ್ಯ ರಸ್ತೆಗೆ ಸುಮಾರು 50 ಅಡಿ ಅಂತರ ಇದೆ. ನಮ್ಮ ಜಮೀನು ನಂಜನಗೂಡಿನಿಂದ ಹುಲ್ಲಹಳ್ಳಿಗೆ ಹೋಗುವ ಎರಡು ದಿಕ್ಕಿನಲ್ಲಿ ಇದೆ. ನಾನು ಅಪಘಾತ ಏರ್ಪಟ್ಟ ಕಾಲಕ್ಕೆ ರಸ್ತೆಯ ಎಡಭಾಗದಲ್ಲಿ ಜಮೀನಿನ ಬಳಿ ನಿಂತಿದ್ದೆನು. ನಾನು ಅಪಘಾತ ಏರ್ಪಟ್ಟ ಕಾಲಕ್ಕೆ ರಸ್ತೆಯ ಪಕ್ಕದಲ್ಲಿ ನಿಂತಿದ್ದೆನು. ನಾನು ರಸ್ತೆಯ ಪಕ್ಕ ನಿಂತಿರಲಿಲ್ಲ, ಬದಲಾಗಿ ಜಮೀನಿನಲ್ಲಿ ನಿಂತಿದ್ದೆನು ಎಂದರೆ ಸರಿಯಲ್ಲ. ಚಾಸಾ-2 ಮತ್ತು ಮೃತ ರುಚಿತಾರವರು ನನ್ನನ್ನು ನೋಡಿಕೊಂಡು ಬರುತ್ತಿದ್ದು, ನಾನು ಕೂಡ ಊಟ ತೆಗೆದುಕೊಳ್ಳಲು ರಸ್ತೆಯ ಪಕ್ಕದಲ್ಲಿಯೆ ನಿಂತಿದ್ದೆನು. ಚಾಸಾ-2 ರವರು ಬರುತ್ತಿದ್ದ ಸ್ಕೂಟರ್ ಸ್ವಲ್ಪ ಮುಂದೆ ಬರುತ್ತಿದ್ದು, ಬಸ್ಸು ಹಿಂದಿನಿಂದ ಬಂದು ಸ್ಕೂಟರಿಗೆ ಡಿಕ್ಕಿಪಡಿಸಿತು. ಬಸ್ಸಿನ ಬಾಗಿಲನ್ನು ತೆರೆದಿದ್ದು, ಬಸ್ಸು

ಅತಿವೇಗವಾಗಿ ಬರುತ್ತಿತ್ತು. ಆರೋಪಿತನು ಎದುರಿನಿಂದ ಬರುತ್ತಿದ್ದ ಕೆ.ಎಸ್.ಆರ್.ಟಿ.ಸಿ ಬಸ್ಸಿಗೆ ಜಾಗ ಬಿಡಲು ಅತಿವೇಗವಾಗಿ ಬಂದು ಚಾಸಾ-2 ರವರ ಸ್ಕೂಟರಿಗೆ ಎಡಭಾಗದಲ್ಲಿ ಡಿಕ್ಕಿಪಡಿಸಿರುತ್ತಾರೆ. ಚಾಸಾ-2 ಮತ್ತು ಮೃತ ರುಚಿತಾರವರು ಸ್ಕೂಟರಿನಲ್ಲಿ ಬಂದು ಸದರಿ ಸ್ಕೂಟರನ್ನು ನಮ್ಮ ಜಮೀನಿನ ಬಳಿ ನಿಲ್ಲಿಸಿ, ಜಮೀನಿನಲ್ಲಿ ಇದ್ದ ನನ್ನನ್ನು ಕರೆದರು ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಆರೋಪಿತರ ಪರ ವಕೀಲರು ಕಾಲಾವಕಾಶ ಕೇಳಿದ್ದು, ಹಾಗಾಗಿ ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**